ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 13 ನೇ ಮಾರ್ಚ್, 2020

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-

123 (1107) ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ನಡೆದಿರುವುದು ಎಲ್ಲೆಲ್ಲಿ ಮತ್ತು ಯಾವಾಗ ; ಇಲ್ಲಿಯವರೆಗೆ ಎಷ್ಟು ಸಮ್ಮೇಳನಗಳು ನಡೆದಿವೆ; (ಸವಿಸ್ತಾರವಾದ ಮಾಹಿತಿ ನೀಡುವುದು)

(ಆ) 2000ನೇ ಇಸವಿಯಿಂದ ಸದರಿ ಸಮ್ಮೇಳನಗಳಲ್ಲಿ ತೆಗೆದುಕೊಂಡ ನಿರ್ಣಯಗಳೇನು; ಆ ನಿರ್ಣಯಗಳಲ್ಲಿ ಇಲ್ಲಿಯವರೆಗೆ ಎಷ್ಟು ನಿರ್ಣಯಗಳನ್ನು ಸರ್ಕಾರ ಈಡೇರಿಸಿದೆ ;

(ಇ) ಸರೋಜಿನಿ ಮಹಿಷಿ ವರದಿ, ಮಹಾಜನ ವರದಿ, ಡಾ: ಡಿ.ಎಮ್.ನಂಜುಂಡಪ್ಪ ವರದಿ, ಎಮ್.ಇ.ಎಸ್. ಪುಂಡಾಟಿಕೆ ಬಗ್ಗೆ ಎಲ್ಲಾ ಹಂತಗಳಲ್ಲಿ ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸುವುದು, ಹೈಕೋರ್ಟ್‌ನಲ್ಲಿ ಎಲ್ಲಾ ಕಲಾಪಗಳು ಕನ್ನಡದಲ್ಲಿ ನಡೆಯುವಂತೆ ಮಾಡುವ ಬಗ್ಗೆ ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಕಡ್ಡಾಯ, ಹೊರನಾಡು ಕನ್ನಡಿಗರ ಸಮಸ್ಯೆಗಳು ಇತ್ಯಾದಿ ನಿರ್ಣಯಗಳು ಸರ್ಕಾರದ ಯಾವ ಹಂತದಲ್ಲಿ ಇವೆ ; ಎಷ್ಟು ನಿರ್ಣಯಗಳು ಅನುಷ್ಠಾನಗೊಂಡಿವೆ ?